ಮೈಸೂರ ಗೆಜೆಟ್.

ನಂ. 37 ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. ಸನ್ 1889.

ಬೆಂಗಳೂರು, ಶನಿವಾರ, ಸೆಪ್ಟಂಬರ್ ತಾ|| 14, ಸನ್ 1889.

ಟಿಪ್ಪಣಿ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ಮತ್ತು ಇನಾಂ ಸೂಪರ್‌ಟೆಂಡೆಂಟರು, ಕಾಂಪೆಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರಿಗಳು, ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇರ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರ್ರು, ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜ್‌ರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್‌ಟೆಂಡೆಂಟರು, ಫಾರೆಸ್ಟ್ ಆಫಿಸರಿಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸುಗಳು.

3ನೇ ಭಾಗ–ಶ್ರೀಮತ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ಮತ್ತು ರೆಗ್ಯುಲೇಷನ್‌ಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

ಜನರಲ್.

ಇಸ್ತಿಹಾರ್‌ನಾಮೆ.

ತಾರೀಖು 20ನೇ ಆಗಸ್ಟ್ 1889.

ನಂ. 132.—ಸಕಲ ಜನಗಳಿಗೂ ತಿಳಿಯುವಬ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿರುವ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೊಸ್ಕರ ಕ್ರಮಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ಸಮೂದಿಸಿರುವ ಸ್ಥಳದಲ್ಲೂ ಮತ್ತು ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು, ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಮುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಡದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಬಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ ವೈಕಿ ಕೀಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ ವೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲನ್ನು ಪಾವತಿ ಮಾಡಿದ್ದರೆ ಜಮೀನುಗಳು ಆವ್ವಲ್‌ಕ್ರಯದಾರನ ಖರ್ಚಿನಲ್ಲಿ ಪ ನುಕ್ಕಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರಾಗಿ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜು ಮುಕ್ತಾಯ ಮಾಡಲ್ಪಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯುಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರೆಜಿಸ್ಟರ್ ಮಾಡಲ್ಪಟ್ಟು, ಪೈಪ್ಯಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಸರಂತು, ಸದರೀ ಹರಾಜಿನಿಂದ ನುಕ್ಸಾ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲನಲ್ಲಿ ಆಗುವ ಆಜ್ಞೆರ್ ಹುಕುಮಿಗೆ ಸದರೀ ಕ್ರಯವು ವಳಪಟ್ಟು ಯಿರುತ್ತೆ.

ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡಿದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜು ಹುರಕಾರಕ್ಕೆ ಕೊಟ್ಟುವಳೀ ಯಾಜಬೇಕಾದ ಕ್ವಿಟೆರೆಂಟ್.	ಸಾಲ್ಕಿಯಾನಾ ಸರಕಾರದ ಕಂದಾಯದ ಬಾಕೀ.	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಆಂಥಾ ಸರಕಾರದ ಕಂದಾಯದ ಬಾಕೀ.	ಹರಾಜು ತಾರೀಖು ವಗೈರೆ.
				ಖಂ. ಕೊ. ಪ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಬೆಂಗಳೂರು.	ಹೊಸಕೋಟೆ - ನಂದಗುಡಿ	1 ದಳಸಗೆರೆ	ತಿಮ್ಮಣ್ಣಿ ವೆಂಕಟಪ್ಪ ಮತ್ತು ರಾಮಣ್ಣ ಕಟ್ಟಾಸಪ್ಪ	91 10 5¾	1284—2—4	1182—0—0	2903—11—3 ಬಡ್ಡಿ ಮತ್ತು ಸೇಷನ್ ನಾರು	1889ನೇ ಇಸವಿ ಸೆಪ್ಟಂಬರ್ 27ನೇ ತಾರೀಖು ಕಛೇರಿಯ ಎಣ ಆಸಿಸ್ಟೆಂಟರ ರೂಬರು.
		2 ವೆಂಕಟಾಪುರ		7 4 0				
		3 ಮೇದೂರು		11 1 8¼				
		4 ದ್ದನಹಳ್ಳಿ		33 13 12¼				
		5 ಗೆದ್ದಲಹಳ್ಳಿ		29 19 11¼				

ಷರಾ—1. ಮೇಲ್ಕಂಡ ಪ್ರತಿ ಗ್ರಾಮಕ್ಕೂ ಬೇರೆ ಬೇರೆಯಾಗಿ ಕ್ವಿಟ್‌ರೆಂಟ್ ವಾಯಿದ್ದಾಡಲ್ಪಟ್ಟಿರುವದಿಲ್ಲ.

2. ಜೋಡೀದಾರರುಗಳೆಂದಲಾಗಲಿ, ಬಾಧ್ಯತೆಯ ಮೂಲಕ ಯಿವರುಗಳಿಗೆ ಹಿಂದೆ ಯಿದ್ದವರಿಂದಾಗಲಿ, ಉಂಟುಮಾಡಲ್ಪಟ್ಟ ತಮಾಂ ಹಿಡುವಳಿಗಳಿಗೂ, ದೇಣಿಗೆಗಳಿಗೂ ಮತ್ತು ಹಕ್ಕುಗಳಿಗೂ ಅಥವಾ ಮತ್ಯಾವ ಸುಬಂಧಗಳಿಗೂ ಸದರೀ ಹರಾಜು ವಳಪಟ್ಟಿರುವದಿಲ್ಲ.

ತಾರೀಖು 27ನೇ ಆಗಸ್ಟ್ 1889.

ನಂ. 141.—ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ ಕೋಲಾರದ ಬಂಗಾರ ಗನಿಗಳ ವ್ಯಾಂತ್ಯದಲ್ಲಿ ಹಾಲಿ ತಯಾರಾಗಿರುವ ಮುಸಾಫರ್ ಬಂಗ್ಲೆಯು ಫಸ್ಟ್ ಕ್ಲಾಸ್ ಮುಸಾಫರ್ ಬಂಗ್ಲೆಯಂತೆ ಯಣಿಸಲ್ಪಡತಕ್ಕದ್ದು.

ತಾರೀಖು 20ನೇ ಆಗಸ್ಟ್ 1889.

ನಂ. 147.—1879ನೇ ಇಸವಿಯ ಇಂಡಿಯನ್ ಸ್ಟಾಂಪ್ ಆಕ್ಟಿನ 8ನೇ ಸೆಕ್ಷನ್ನಿಂದ ಉಂಟುಮಾಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವದರಲ್ಲಿ ಶ್ರೀಮನ್ಮಹಾರಾಜ ಸರ್ಕಾರದವರು ಹುಕುಂ ಮಾಡುವದೇನಂದರೆ, ಬಂದು ಜಾಯಿಂಟ್ ಸ್ಟಾಕ್ ಕಂಪೆನಿಯಿಂದ ಅಧಾರ ಪತ್ರದ ಷರತ್ತುಗಳನುಸರಿಸಿ ಸದರೀ ಕಂಪೆನಿಯ ಪೂರಾ ಯು ವಂದು ಭಾಗದ ಆಸ್ತಿಯನ್ನ ಡಿಬೆಂಚರ್ ಪತ್ರದಾರರು ಮತ್ತು ಸದರೀ ಪತ್ರಕ್ಕೆ ಕೇರಿಸಲ್ಪಟಂಥಾ ಬಡ್ಡಿ ಚೀಟಿವುಳ್ಳವರು ಯಿವರುಗಳ ಪ್ರಯೋಜನಕ್ಕಾಗಿ ಟ್ರಸ್ಟೀಸ್ ಯಾನೆ ಖಾತರ್ದಾರರಿಗೆ ಒಪ್ಪಿಸು

ವಂಥಾ ಸದರೀ ಆಕ್ಟು ಅನುಸಾರವಾಗಿ ಹುಟ್ಟುವ ಡಿಬೆಂಚರ್ ಸತ್ರಗಳ ಮೇಲೆ ವಸೂಲ್ಮಾಡಲ್ಪಡಬೇಕಾದ ಸ್ಟ್ಯಾಂಪ್ ಶೀರ್ವೆಯು ಮಾಫ್ ಮಾಡಲ್ಪಡತಕ್ಕದ್ದು.

ತಾರೀಖು 23ನೇ ಆಗಸ್ಟ್ 1889.

ನಂ. 145.—ಗವರ್ನಮೆಂಟ್ ಡಿಸ್ಪೆನ್ಸರಿಯಿಂದ ಒಟ್ಟು ಬಿಕರೀ ಡಿಪೋಗಳಿಗೆ ಸಾಗಿಸಲ್ಪಡುವಂತಾ ಪ್ರಾಬಿನಮೇಲೆ ಸರಿಯಾದ ತನಬಿ ನಡಿಸತಕ್ಕ ಬಗ್ಗೆಯಾಗಿ (1888ನೇ ಇಸವಿ ಜನವರಿ 24ನೇ ಮಾರ್ಚು ಮಿನ 185ನೇ ನಂಬರ್ ಇಸ್ತಿಹಾರಿನೊಂದಿಗೆ ಫಾಯಿಷ್ ಮಾಡೋಣಾದ) ನಿಬಂಧನೆಗಳ ಇದರಡಿಕಂಡ ತಿದ್ದುಪಾಟುಗಳನ್ನು ಶ್ರೀಮಂ ಮಹಾರಾಜಾ ಸರ್ಕಾರದವರು ಮಂಜೂರ್ಮಾಡಿರುತ್ತಾರೆಯಾಗಿ, ಸಮಸ್ತಜನಗಳ ತಿಳುವಳಿಕೆ ಬಗ್ಗೆ ಇದರಿಂದ ಪ್ರಕಟಿಸೋಣಾಗಿರುತ್ತದೆ.

I. 7ನೇ ನಿಬಂಧನೆದು ಕಡೇಭಾಗದಲ್ಲಿ "ಆತರುವಾಯ, ರದ್ದಾದ ರಹದಾರಿಗಳ ಫೈಲು ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರ ಬಳಿಗೆ ರವಾನಿಸಲ್ಪಡತಕ್ಕದ್ದು" ಯಂಬ ಮಾತುಗಳಿಗೆ ಬದಲಾಗಿ, "ಆತರುವಾಯ, ರದ್ದಾದ ರಹದಾರಿಗಳ ಫೈಲು ಎಕ್ಸೈಜ್ ಕಮ್ಮಿಷನರವರ ಬಳಿಗೆ ರವಾನಿಸಲ್ಪಡತಕ್ಕದ್ದು" ಯಂಬ ಮಾತು ಸೇರಿಸತಕ್ಕದ್ದು.

II. 8ನೇ ನಿಬಂಧನೆಗೆ ಬದಲಾಗಿ ಇದರಡಿ ಕಂಡ ಕಲಮನ್ನು ಸೇರಿಸತಕ್ಕದ್ದು—ವಿನಂದೆ.

" 8. ರಹದಾರಿಗಳು, ಎಕ್ಸೈಜ್ ಕಮ್ಮಿಷನರ ಆಫಿಸಿಗೆ ಬಂದು ದಾಖಲೆ ಆದಜಾಗೆಲ್ಲಾ ಸ್ಪೆಷಿಯಲ್ ಅಸಿಸ್ಟೆಂಟ್ ಕಮ್ಮಿಷನರವ
" ರಿಂದ ಕಳುಹಿಸಲ್ಪಟ್ಟು ಸಂಸ್ಥಾನಾ ಮುಳೆ ತಪಸೀಲ್ವಾರ್ ಲಿಖ್ಖಗಳೊಂದಿಗೆ ಮೊಕಾಬಿಲೆ ಮಾಡಲ್ಪಡತಕ್ಕದ್ದು. ಎಕ್ಸೈಜ್ ಕಮ್ಮಿಷನ
" ರು ರದ್ದಾದ ರಹದಾರಿಗಳ ಪೊಟ್ಟು ಫೈಲನ್ನು ಪ್ರತಿ ತಿಂಗಳಲ್ಲೂ ದಿವಾಣರವರ ಆಫಿಸಿಗೆ ಕಳುಹಿಸಬೇಕಾದ್ದಲ್ಲದೆ, ಅವೆಗಳ ತನಬಿ ಪರ್ಯೆ
" ವಸೂಲಿನದ ತಪಸೀಲ್ ಸಹ ತಿಳಿಸಬೇಕು. ಸದರೀ ಫೈಲು ದಿವಾಣರವರ ಆಫಿಸಿನಲ್ಲಿ ಪರಿಶೋಧನೆ ಆ ತನಬಿ ಆದನಂತರ ಎಕ್ಸೈಜ್ ಕಮ್ಮಿ
" ಷನರವರಿಗೆ ವಾಪಸ್ ಮಾಡಲ್ಪಡತಕ್ಕದ್ದು. ಆವರು ಆ ರದ್ದಾದ ರಹದಾರಿಗಳನ್ನ ತಮ್ಮಬಳಿ ಪವೂಚರಿನಂತೆ ಕಂಟ್ರಾಕ್ಟು ಪೂರೈಸಿದ
" ಆರು ತಿಂಗಳ ವರಿವಿಗೂ ಯಿಟ್ಟುಕೊಂಡಿದ್ದು ಆ ತರುವಾಯ ನಾಶಪಡಿಸ ಬಹುದು."

ತಾರೀಖು 31ನೇ ಆಗಸ್ಟ್ 1889.

ನಂ. 152.—ಮೆ॥ ಬಿ. ನಾರಣಯ್ಯಂಗಾರ್ರು ಚಿತ್ರದುರ್ಗ ಡಿಸ್ಟ್ರಿಕ್ಟು ಪೋಲೀಸ್ ಚಾರ್ಜ್‌ನ್ನ 1889ನೇ ಇಸವಿ ಆಗಸ್ಟ್ 20ನೇ ತಾರೀಖಿನ ಪೂರ್ವಾಹ್ಣದಲ್ಲಿ ಮೆ॥ ಬಿ. ಗೋಪಾಲಯ್ಯಂಗಾರ್ರಿಗೆ ವೊಪ್ಪಿಸಿರುತ್ತಾರೆ.

ನಂ. 153.—ಕೆಲವು ಇನಾಂದಾರರುಗಳು ತಮ್ಮ ತಮ್ಮ ಜವಾಬ್ದಾರಿಯಿಂದಲೇ ತಮ್ಮ ತಮ್ಮ ಇನಾಂ ಕೆರೆಗಳಕೋಡಿ ಅಗಲದಲ್ಲಿ ಬದಲಾವಣೆ ಮಾಡಿರುವದಾಗಿ ತಿಳುವಳಿಕೆಗೆ ಬಂದಿರುವದ್ದರಿಂದ ಗವರ್ನಮೆಂಟಿನವರು ಇದರಿಂದ ತಿಳಿಯಪಡಿಸುವದೇನಂದರೆ, ಇನಾಂ ಕೆರೆಗಳ ಕೋಡಿ ವ ಇತರ ಕಟ್ಟಡದ ಕೈಮದಲ್ಲಿ ಪಬ್ಲಿಕ್‌ವರ್ಕ್ಸ್ ಇಲಾಖೆಯವರ ಅಪ್ಪಣೆ ಯಿಲ್ಲದೆ, ಯಾವರೀತಿಯಾದರೂ ಬದಲಾವಣೆ ಮಾಡಿದಲ್ಲಿ ಆಂಥಾ ಕೆರೆಗಳ ಕೆಳಗಡೆ ಇರುವ ಸರ್ಕಾರೀ ಕೆರೆಗಳು ಬಡದು ಹೋಗೋತಾದ್ದರಿಂದ ಯಿನ್ನುಮೇಲೆ ಅಂಥಾ ಬದಲಾವಣೆಯಾಗ ತಕ್ಕದ್ದಲ್ಲವೆಂದು ಗವರ್ನಮೆಂಟಿನವರು ನಿಷೇಧಿಸುತ್ತಾರೆ.

ತಾರೀಖು 3ನೇ ಸೆಪ್ಟೆಂಬರ್ 1889.

ನಂ. 154.—ದಿವಾಣರವರ ಆಫಿಸಿಗೆ ಕೇರಿದ ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಯಸ್. ವೈದ್ಯನಾಥಯ್ಯರ್ ಯವರು ಬೆಂಗಳೂರು ಡಿಸ್ಟ್ರಿಕ್ಟಿಗೆ ವೊಕರ್ರಾಡಲ್ಪಟ್ಟು ಡಿಸ್ಟ್ರಿಕ್ಟು ಟ್ರೆಜರೀ ಚಾರ್ಜ್‌ನ್ನ ವಹಿಸತಕ್ಕದ್ದು.

ನಂ. 155.—ಶಿವಮೊಗ್ಗಾ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಸರ್ಜನ್ ಜೆ. ಯಸ್. ಲಕ್ಷ್ಮಣಸ್ವಾಮಿ ಯವರಿಗೆ 1889ನೇ ಇಸವಿ ಆಗಸ್ಟ್ 21ರ ಲಾಗಾಯತು ಯೇಳು ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತದೆ.

ತಾರೀಖು 5ನೇ ಸೆಪ್ಟೆಂಬರ್ 1889.

ನಂ. 157.—ಮೈಸೂರಿನಲ್ಲಿರುವ ಶ್ರೀಮಂ ಮಹಾರಾಣಿಯವರ ಸ್ತ್ರೀಗಳ ಆಸಪತ್ರಿಯೊಳಗೆ ಕೆಲಸ ನೋಡುತ್ತಿರುವ ಅಸಿಸ್ಟೆಂಟ್ ಸರ್ಜನ್ ಮಿಸ್. ಆರ್. ಗೋವಿಂದರಾಜುಲು ಯಂಬಾಕೆಗೆ 1889ನೇ ಇಸವಿ ಆಗಸ್ಟ್ 23ರ ಲಾಗಾಯತು ಯಾ ಆಕೆ ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ ಹದಿನಾಲ್ಕು ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತದೆ.

ನಂ. 158.—ಬೆಂಗಳೂರು ಸೈಂಟ್ ಮಾರ್ತಾ ಆಸಪತ್ರಿಯಲ್ಲಿ ಕೆಲಸನೋಡುತ್ತಿರುವ ಅಸಿಸ್ಟೆಂಟ್ ಸರ್ಜನ್ ಮಿಸ್. ಯಂ. ಗುರದ ಯಾಳಿಂಗ್ ಯಂಬಾಕೆಗೆ 1889ನೇ ಇಸವಿ ಸಪ್ಟೆಂಬರ್ ಗುರ್ತಿ ಲಾಗಾಯತು ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತದೆ.

ನಂ. 159.—ಸ್ 1888ನೇ ಇಸವಿ ನವಂಬರ್ 10ನೇ ಮಾರ್ಚು ಮಿನ ಗೆಜೆಟ್‌ನಲ್ಲಿ ಫಾಯಿಷ್ ಮಾಡೋಣಾದ 1888ನೇ ಇಸವಿ ಅಕ್ಟೋಬರ್ 26ನೇ ಮಾರ್ಚು ಮಿನ 148ನೇ ನಂಬರುಳ್ಳ ಇಸ್ತಿಹಾರ್ ಅನುಸರಿಸಿ ತಿಳಿಯಪಡಿಸುವದೇನಂದರೆ, ತೀರ್ಥಹಳ್ಳಿ ತಾಲ್ಲೂಕು ಬೈಕಿ ಬಾನಂದೂರು ಮಾಗಣಿಗೆ ಕೇರಿದ ಬಾನಂದೂರು ಗ್ರಾಮವು ಸದರೀ ಇಸ್ತಿಹಾರ್‌ನಾಮೆಗೆ ಲಗ್ಗತ್ತಾಗಿರುವ A ಗುರ್ತುಳ್ಳ ಅರ್ವೆಡಿಕ್ಷನ್ ನಮೂದಾದ ಶಿವಮೊಗ್ಗಾ ಡಿಸ್ಟ್ರಿಕ್ಟಿನ ಮಲ್‌ನಾಡ್ ಪ್ರದೇಶದೊಂದಿಗೆ ಕೇರಿಸಲ್ಪಟ್ಟಿರುತ್ತದೆ.

A ಗುರ್ತುಳ್ಳ ಅರ್ವೆಡಿಕ್ಷನ್‌ನಲ್ಲಿ "ತೀರ್ಥಹಳ್ಳಿ ತಾಲ್ಲೂಕು ಬೈಕಿ ಬರನೆ" ಯಂಬದಕ್ಕೆ ಬದಲಾಗಿ "ತೀರ್ಥಹಳ್ಳಿ ತಾಲ್ಲೂಕಿನಲ್ಲಿರುವ ಬರೂರು" ಯಂಬದಾಗಿ ಓದಿಕೊಳ್ಳತಕ್ಕದ್ದು.

12ನೇ ಕಲಮಿನಲ್ಲಿ "9ನೇ ರೂಲ್ಸಿನಲ್ಲಿ" ಯಂಬದಕ್ಕೆ ಬದಲಾಗಿ "8ನೇ ರೂಲ್ಸಿನಲ್ಲಿ" ಯಂಬದಾಗಿ ಓದಿಕೊಳ್ಳತಕ್ಕದ್ದು.

ತಾರೀಖು 28ನೇ ಆಗಸ್ಟ್ 1889.

ನಂ. 151.—ಮೈಸೂರು ಲೋಕಲ್ ಸರ್ವಿಸ್ ಕ್ರಿಮಿನಲ್ ಪರೀಕ್ಷೆಯಲ್ಲಿ ತೇರ್ಗಡೆಯಾದವರ ಪಟ್ಟಿ.

ದರ್ಜೆ ನಂಬರ್	ರಜಿಸ್ಟ್ರರ್ ನಂ.	ಹೆಸರು.	ಹುದ್ದೆ.	ಯಾವ ಭಾಷೆಯಲ್ಲಿ ಪರೀಕ್ಷೆ ಕೊಟ್ಟದ್ದು.
1	3	ಚಿತ್ರದುರ್ಗ ಭೀಮಯ್ಯ ..	ಚಿತ್ರದುರ್ಗದ ಡೆಪ್ಯುಟಿ ಕಮ್ಮಿಷನರವರ ಕಚೇರಿ ಜುಡಿಷಿಯಲ್ ಡೆಪ್ಯುಟಿ ಮುನಸಿ	ಇಂಗ್ಲಿಷ್
2	12	ಜಿ. ಆರ್. ಶ್ರೀನಿವಾಸಯ್ಯಂಗಾರ್	ಕಡೂರು ಡೆಪ್ಯುಟಿ ಕ|| ಕಚೇರಿ ಜುಡಿಷಿಯಲ್ ಹೆಡ್‌ಮುನಸಿ	ಡಿಟೋ
3	35	ಯಸ್. ತಿಮ್ಮಪ್ಪಯ್ಯ ..	ಬೆಂಗಳೂರು ಆಮ್ಯತಮಹಾಲ್ ಇಲಾಖಾ ರೈಟರ್ ..	ಡಿಟೋ
4	11	ಎ. ಆಲಂಗ್ರಯ್ಯಂಗಾರ್ ..	ಚಿತ್ರದುರ್ಗ ಡಿಸ್ಟ್ರಿಕ್ಟ್ ರೆಜಿಸ್ಟ್ರಾರವರ ಆಫಿಸ್ ಕ್ಲರ್ಕ್ ..	ಡಿಟೋ
5	1	ಮೆ|| ಜಿ. ಇ. ಡನ್ನಿಂಗ್ ..	ಕೋಲಾರ ಬೈ ಸ್ಕೂಲ್ ಹೆಡ್ ಮಾಸ್ಟರ್ .	ಡಿಟೋ
6	22	ಬಿ. ಕೃಷ್ಣಯ್ಯಂಗಾರ್ ..	ಮಿಲಿಟರಿ ಸೆಕ್ರೆಟರಿಯವರ ಆಫಿಸ್ ಕ್ಲಾರ್ಕ್ ..	ಡಿಟೋ
7	83	ಕೆ. ಜಿ. ಶಾಮಂಣ ..	ಹೊಳೇನರಸೀಪುರದ ಪೋಲೀಸ್ ಇನ್‌ಸ್ಪೆಕ್ಟರ್ ..	ಡಿಟೋ
8	78	ಹೆಚ್. ರಾಮಯ್ಯ ..	ಮಾಲೂರು ಫಾರೆಸ್ಟ್ ರೇಂಜರ್. ..	ಡಿಟೋ
9	7	ಬಿ. ಯಸ್. ವೆಂಕಟೇಶಯ್ಯ ..	ಚಿತ್ರದುರ್ಗ ಡೆಪ್ಯುಟಿ ಕಮ್ಮಿಷನರವರ ಆಫಿಸ್ ಕ್ಲಾರ್ಕ್ ..	ಡಿಟೋ
10	56	ಕೆ. ಅನಂತಯ್ಯ ..	ಹಾಸನ ಮುನಸಿಫ್ ಕೋರ್ಟ್ ಮುನಸಿ ..	ಡಿಟೋ
11	54	ಕೆ. ನರಸಿಹ್ಮಯ್ಯಂಗಾರ್ ..	ಕಡೂರು ಡೆಪ್ಯುಟಿ ಕಮ್ಮಿಷನರವರ ಆಫಿಸಿನಲ್ಲಿ ಕೆಲಸ ಮಾಡುವ ಜನರಲ್ ಅಸಿಸ್ಟೆಂಟ್ ಕಮ್ಮಿಷನರವರ ಆಫಿಸ್ ಡೆಪ್ಯುಟಿ ಮುನಸಿ	ಡಿಟೋ
12	8	ಡಿ. ಸುಬ್ಬರಾವ್ ..	ಹಿರಿಯೂರು ತಾಲ್ಲೂಕು ಹೆಡ್‌ಮುನಸಿ ..	ಡಿಟೋ
13	10	ಟಿ. ಕೆ. ಸುಂದರರಾಜಯ್ಯಂಗಾರಿ	ಮೈಸೂರು ಡೆಪ್ಯುಟಿ ಕ|| ಆಫಿಸ್ ರೆವಿನ್ಯೂ ಅಕ್ಕೌಂಟೆಂಟ್ ..	
14	79	ಮೆ|| ಎ. ವಿರಾಸಾಮಿಮೊದಲಿಯಾರ್ .. .	ಖಜಾನಾ ಬಕ್ಷಿ	ಡಿಟೋ
15	40	ಎ. ಯಂ. ಸ್ಟ್ಯಾಗ್ಸ್ .	ಕಡೂರು ಡೆಪ್ಯುಟಿ ಕ|| ಆಫಿಸ್ ಡೆಪ್ಯುಟಿ ಕ್ಲಾರ್ಕ್ ..	ಡಿಟೋ
16	50	ಯರ್. ಅನಂತರಾಮಯ್ಯಂಗಾರ್	ಶಿವಮೊಗ್ಗ ಡೆಪ್ಯುಟಿ ಕಮ್ಮಿಷನರವರ ಆಫಿಸ್ ಕ್ಲಾರ್ಕ್ ..	ಡಿಟೋ
17	80	ಎ. ಸೂರಪ್ಪ .	ಮೈಸೂರು ಗವರ್ನಮೆಂಟ್ ಪ್ರೆಸ್ ಡೆಪ್ಯುಟಿ ಯಗ್ಜಾಮಿನರ್ ..	ಡಿಟೋ
18	69	ಹೆಚ್. ವೆಂಕಟಸುಬ್ಬಯ್ಯ ..	ಹಾಸನ ಡೆಪ್ಯುಟಿ ಕ|| ಆಫಿಸ್ ಜುಡಿಷಲ್ ರಿಕಾರ್ಡ್ ಕೀಪರ್ ..	ಡಿಟೋ
19	96	ಮೆ|| ಪಿ. ಆರ್. ವೆದೆರಲ್ ..	ಚಿಕ್ಕಮಗಳೂರು ಪೋಲೀಸ್ ಆ|| ಅಸಿಸ್ಟೆಂಟ್ ಕಮ್ಮಿಷನರ್ ..	ಡಿಟೋ
20	2	ಜೆ. ಬಸಪ್ಪಚೆಟ್ಟಿ ..	ಮಂಡ್ಯದ 2ನೇ ಕ್ಲಾಸ್ ಹಾಸ್ಪಿಟಲ್ ಅಸಿಸ್ಟೆಂಟ್ .	ಡಿಟೋ
21	44	ಯಂ. ನಂಜಪ್ಪ ..	ಶ್ರೀರಂಗಪಟ್ಟಣ ಮುನಸಿಫ್ ಕೋರ್ಟ್ ಡೆಪ್ಯುಟಿ ಮುನಸಿ ..	ಡಿಟೋ
22	37	ಆರ್. ಶೇಷಗಿರಿರಾವ್ ..	ಕಂಟ್ರೋಲರವರ ಆಫಿಸ್ ಅಂಕೌಂಟೆಂಟ್ ..	ಡಿಟೋ
23	60	ಯಂ. ನಾರಾಯಣಸಾಮಿನಾಯಡು	ಮಾಲೂರು ತಾಲ್ಲೂಕು ರಸ್ತೇದಾರ್ ..	ಡಿಟೋ
24	51	ಬಿ. ಗರುಡಾಚಾರ್ ..	ಶಿವಮೊಗ್ಗ ಟ್ರೆಜರಿ ಹೆಡ್ ಅಕೌಂಟೆಂಟ್ ..	ಡಿಟೋ
25	19	ಡಿ. ವೆಂಕಟರಾಮಯ್ಯ, ..	ಹೊಸಕೋಟೆ ತಾಲ್ಲೂಕು ನಗದೀ ಗುಮಾಸ್ತೆ ..	ಕನ್ನಡ
26	75	ಕೆ. ನಾರಾಯಣಯ್ಯಂಗಾರ್ ..	ಪಾವಗಡ ತಾಲ್ಲೂಕು ರೆವಿನ್ಯೂ ಜುನಾರ್ದಾರ್ ..	ಡಿಟೋ
27	43	ರಾಜುರಾವ್ ..	ಪಾವಗಡ ತಾಲ್ಲೂಕು ಜುಡಿಷಲ್ ಗುಮಾಸ್ತೆ ..	ಡಿಟೋ
	71	ಡಿ. ನಾರಾಯಣರಾವ್ ..	ತುಮಕೂರು ಡಿಸ್ಟ್ರಿಕ್ಟ್ ರೆಜಿಸ್ಟ್ರೇರ್ಸ್ ಹೆಡ್ ಕ್ಲಾರ್ಕ್ ..	ಇಂಗ್ಲಿಷ್
28	18	ನರಸಿಹ್ಮ ಶ್ರೀನಿವಾಸ್ ..	ಸರ್ವೆ ಡೆಪ್ಯುಟಿ ಸೂಪರಿಂಟೆಂಡೆಂಟರವರ ಆಫಿಸ್ ಹೆಡ್‌ಕ್ಲಾರ್ಕ್ ..	ಡಿಟೋ
29	70	ಪಿ. ರಂಗರಾವ್ ..	ತುಮಕೂರು ಡೆಪ್ಯುಟಿ ಕಮ್ಮಿಷನರವರ ಆಫಿಸ್ ಕ್ಲಾರ್ಕ್ ..	ಡಿಟೋ
30	20	ಎ. ದೇವರಸಯ್ಯ ..	ಶಿವಮೊಗ್ಗ 1ನೇ ಆ|| ಕಮ್ಮಿಷನರವರ ಆಫಿಸ್ ಹೆಡ್‌ಮುನಸಿ ..	ಕನ್ನಡ
31	93	ಬಿ. ಹೆಚ್. ಶ್ರೀಕಂಠಯ್ಯ ..	ಮುಳಬಾಗಲ್ ತಾಲ್ಲೂಕು ಪೋಲೀಸ್ ಇನ್‌ಸ್ಪೆಕ್ಟರ್ ..	ಡಿಟೋ
32	46	ಮೆ|| ಹೆಚ್. ನಂಜುಂಡರಾಜಅರಸ್	ತುಮಕೂರು ಅಸಿಸ್ಟೆಂಟ್ ಕಮ್ಮಿಷನರ್ ..	ಇಂಗ್ಲಿಷ್
33	29	ಹೆಚ್. ನರಸಯ್ಯ ..	ಶ್ರೀರಂಗಪಟ್ಟಣ ಮುನಸಿಫ್ ಕೋರ್ಟ್ ಹೆಡ್ ಮುನಸಿ ..	ಕನ್ನಡ
34	84	ವ. ವೆಂಕಟಕೃಷ್ಣಯ್ಯ ..	ಹಾಸನ ತಾಲ್ಲೂಕು ಶಿರಸ್ತೇದಾರ್ ..	ಡಿಟೋ

ತಾರೀಖು ೧೬ನೇ ಸೆಪ್ಟಂಬರ್ 1889.

ನಂ. 166.—ಇದರಡಿ ಕಂದ ಜನರು 1889ನೇ ಇಸವಿಯ ಮೈಸೂರ ಲೋಕಲ್ ಸರ್‌ವಿಸ್ ರೆವಿನ್ಯೂ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುತ್ತಾರೆ.

ದರ್ಜೆ ನಂಬರುರ್	ಜಿಸ್ಟ್ರಿ ನಂ.	ಹೆಸರು.	ಹುದ್ದೆ.	ಯಾವ ಭಾಷೆಯಲ್ಲಿ ಪರೀಕ್ಷೆ ಕೊಟ್ಟದ್ದು.
1	28	ಹೆಚ್. ಕೃಷ್ಣರಾವ್ ..	ಅಡ್ವೊಕೇಟ್ ಮೈಸೂರು ..	ಇಂಗ್ಲಿಷ್
2	88	ಬಿ. ತಿಮ್ಮಪ್ಪಯ್ಯ .	ಹಾಸನದ ಫಾರೆಸ್ಟ್ ಇಲಾಖೆ ಹೆಡ್‌ಕ್ಲರ್ಕ್ ..	ಡಿಟೋ
3	69	ಯ್. ರಾಮಚಂದ್ರರಾವ್ ..	ಬೆಂಗಳೂರ ಟರ್ನಪೊಲೀಸ್ ಚೀಫ್‌ಕಾನಿಸ್ಟೆಬಲ್	ಡಿಟೋ
4	9	ಯಸ್. ವೆಂಕಟರಂಗಯ್ಯಂಗಾರ್.	ದಿವಾನರವರ ಆಫಿಸ್ ಡಿಪ್ಯೂಟಿಕ್ಲರ್ಕ್ ..	ಡಿಟೋ
5	4	ಯ್. ಸುಬ್ಬಯ್ಯ .	ಮೈಸೂರು ಸಬ್ ಕೋರ್ಟು ಕ್ಲರ್ಕ್ ..	ಡಿಟೋ
6	91	ಸಿ. ನರಸುಬ್ಬಯ್ಯಂಗಾರ್ ..	ನಗರ ಡಿ|| ಸರ್ವಕೋರ್ಟು ಸಿರಸ್ತೇದಾರ್ ..	ಡಿಟೋ
7	23	ಶಿವಾಜೀಸುಬ್ಬರಾವ್ ..	ಸರ್ವೇ ಸೂ|| ಆಫಿಸ್ ಹುಜೂರು ಕಾರಕೂ .	ಕನ್ನಡ
8	6	ಯ್. ರಾಮಸ್ವಾಮಯ್ಯಂಗಾರ್	ಚಿತ್ರದುರ್ಗ ಡಿ|| ಆ್ಯಪಿಂಗ್ ಜುಡಿಷಿಯಲ್ ಹೆಡ್ ಮುನಸಿ ..	ಇಂಗ್ಲಿಷ್
9	24	ಸಿ. ರಾಮರಾವ್ ..	ಕಡೂರು ಡಿಸ್ಟ್ರಿಕ್ಟು ರೆವಿನ್ಯೂ ಸಿರಸ್ತೇದಾರ್ ..	ಡಿಟೋ
10	90	ಬಿ. ಸಟ್ಟಾಪತಿಪಿಳ್ಳೆ ..	ಹಾಸನದ ಪೊಲೀಸ್ ಇನ್‌ಸ್ಪೆಕ್ಟರ್ ..	ಡಿಟೋ
11	48	ಯಸ್. ರಾಘವೇಂದ್ರರಾವ್ ..	ಮೈಸೂರ ಗೌ|| ಫೈನ್ ಹೆಡ್‌ಕ್ಲರ್ಕ್ ವ ಟ್ರೆಸರ್ಲೇಟರ್ ..	ಡಿಟೋ
12	74	ಸಿ. ವ್ಯಾಸರಾವ್ ..	ಹಾಸನ ಜನರಲ್ ಅಸಿಸ್ಟೆಂಟ್ ಕಂ|| ಆಫಿಸ್ ಡಿಪ್ಯೂಟಿ ಮುನಸಿ ..	ಡಿಟೋ
13	76	ಯಂ. ರಾಮಣ್ಣ ..	ಅಡ್ವೊಕೇಟ್, ಶ್ರೀರಂಗಪಟ್ಟಣ ..	ಡಿಟೋ
14	100	ಯಸ್. ರಂಗಾಚಾರ್ಲು ..	ಮೈಸೂರು ಮಹಾರಾಜರವ ಸಂಸ್ಕೃತ ಕಾಲೇಜ್ ಇನ್‌ಸ್ಪೆಕ್ಟರ್ ..	ಡಿಟೋ
15	41	ಹೆಚ್. ಕೇಶವಯ್ಯ. ..	ಕಪೂರು ಡಿ|| ಹೆಡ್ ಕ್ವಾ|| ಆಫಿಸ್ ಪೊಲೀಸ್ ದುಯ್ಯಂ ಮುನಸಿ ..	ಡಿಟೋ
16	82	ಬಿ. ಜೆ. ಕುಮಾರಸ್ವಾಮಿನಾಯಕ್	ಪಾವಗಡ ತಾಲ್ಲೂಕು ಅಮಲ್ದಾರ್ ..	ಡಿಟೋ
17	26	ಯಂ. ಮಹಾಲಿಂಗಯ್ಯ ..	ಹಾಸನ ಡಿಸ್ಟ್ರಿಕ್ಟು ರೆವಿನ್ಯೂ ಸಿಯ್ಯಂ ಮುನಸಿ ..	ಡಿಟೋ
18	16	ಯಂ. ಜಿ. ಕೃಷ್ಣಯ್ಯಂಗಾರ್	ಮೈಸೂರು ಡಿಸ್ಟ್ರಿಕ್ಟ್ಯಹೆಡ್ ಅಕೌಂಟೆಂಟ್ ..	ಡಿಟೋ
19	58	ಕೆ. ಶಾಮಯ್ಯಂಗಾರ್ ..	ಮೈಸೂರು ಫಾರೆಸ್ಟ್ ಸೂ|| ಆಫಿಸ್ ಅಕೌಂಟೆಂಟ್ ..	ಡಿಟೋ
20	18	ನೃಸಿಂಹಶ್ರೀವಾಸ್ ..	ಸರ್ವೇ ಡಿಪ್ಯೂಟಿ ಸೂ|| ಆಫಿಸ್ ಹೆಡ್‌ಕ್ಲರ್ಕ್ ..	ಡಿಟೋ
21	47	ಕೇಶವಮೊದಲಿಯಾರ್. ..	ಕೋಲಾರದಲ್ಲಿ ಪಬ್ಲಿಕ್‌ವರ್ಕ್ಸ್ ಇಲಾಖಾ ಅಕೌಂಟೆಂಟ್ ..	ಡಿಟೋ

ಬವೋಜೇಬ್ ಹುಕುಂ,
ಆರ್. ವಿಜಯೀಂದ್ರರಾವ್,
ಚೀಫ್ ಸೆಕ್ರೆಟರಿ.

ವಿದ್ಯಾಭ್ಯಾಸದ ಇಲಾಖೆ.

1889ನೇ ಇಸವಿ ಸೆಪ್ಟಂಬರ್ ತಾರೀಖು 3.

ಮೈಸೂರು ದೇಶೀಯ ಪರೀಕ್ಷೆ.

ಸ್ ಈ 1890ನೇ ಇಸವಿಯಲ್ಲಿ ನಡೆಯುವ ಮೈಸೂರು ದೇಶೀ ವಿದ್ಯಾರ್ಥಿಗಳ ಪರೀಕ್ಷೆಗಾಗಿ ಇದರಡಿಕಂಡ ಪ್ರಕಾರ ಬಹುಮಾನಗಳು ಕೊಡಲ್ಪಡುವವು:—

ಹಿಂದುಸ್ತಾನಿ.

ಬೆಂಗಳೂರು ಬಾರ್ಲೈಬ್ರೆ ಗವರ್ನಮೆಂಟ್ ಹಿಂದುಸ್ತಾನಿ ಸ್ಕೂಲ್ ಹೆಡ್‌ಮಾಸ್ಟರ್ ವಿಾರ್‌ಭಜಲುಲ್ಲಾ ಯವರಿಂದ. ಬೆಂಗಳೂರು ಮಹಮ್ಮದೀಯ್ಯ ಮದ್ರಸೆಯಿಂದ ತೇರ್ಗಡೆಹೊಂದುವವರ ವೈಕಿ ಯಲ್ಲಾ ಭಾಗಗಳೂ ಸೇರಿ ಅಧಿಕನಂಬರುಗಳನ್ನ ಹೊಂದುವಂಥಾ ವಿದ್ಯಾರ್ಥಿಗೆ. ನಾಲ್ಕುಥಾರಸಿ ಪುಸ್ತಕಗಳು:—ಅಖ್ಲಾಟೆ ಮಹಮ್ಮದಿ, ದಿವಾ ಉರಫು, ದೋಸ್ತಾ ಮತ್ತು ದಿವಾನೇ ಹಾಫಿಜ್.

ಕನ್ನಡ.

ಹಾಸನ ತಾಲ್ಲೂಕು ಗ್ರಾಮದಲ್ಲಿರುವ ಶ್ರೀಮಠಂ ತಿರುನಾರಣಯ್ಯಂಗಾರ್ಯವರಿಂದ ಹಾಸನ ತಾಲ್ಲೂಕು ಗ್ರಾಮದ ಬ್ಯಾಂಚ್ ಸ್ಕೂಲಿನಿಂದ ತೇರ್ಗಡೆ ಹೊಂದುವವರ ವೈಕಿ ಯಲ್ಲಾ ಭಾಗಗಳೂ ಸೇರಿ ಅಧಿಕ ನಂಬರುಗಳನ್ನ ಹೊಂದುವಂಥಾ ವಿದ್ಯಾರ್ಥಿಗೆ. ನಾಲ್ಕುರೂಪಾಯಿ ಬೆಲೆಯುಳ್ಳ ಬಂದು ಪಳ್ಳೀಬಟ್ಟು.

ಎಲ್. ರೈಸ್,
ಎಜ್ಯುಕೇಷನ್ ಸೆಕ್ರೆಟರಿ.